<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C: 1057/2025
CW-6 PW-2

ಹೆಸರು : ಬಸವರಾಜ

ತಂದೆಯ ಹೆಸರು : ಚೆನ್ನವೀರಯ್ಯ ಮಠಪತಿ

ವಯಸ್ಸು : 46 ವರ್ಷ

ಉದ್ಯೋಗ : ಹೋಟೆಲ್ ಕೆಲಸ,

ವಾಸ ಸ್ಥಳ : ಕಂದಗೂಳ, ತಾ: ಕಾಳಗಿ.

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 09.03.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ಚಾಸಾ-1 ಮತ್ತು ಚಾಸಾ-7ರವರ ಪರಿಚಯ ಇದೆ. ಈ ಪ್ರಕರಣದ ಆರೋಪಿತರ ಪರಿಚಯ ಇಲ್ಲ ಅವರನ್ನು ಈ ಮೊದಲು ಪೊಲೀಸರು ನನಗೆ ತೋರಿಸಿಲ್ಲ.

ಸುಮಾರು 1-2 ವರ್ಷಗಳ ಹಿಂದೆ ವೀರಭದ್ರೇಶ್ವರ ದೇವಸ್ಥಾನದ ಹುಂಡಿಯ ಕಳ್ಳತನ ಆಗಿತ್ತು. ಆದಕಾರಣ, ಚಾಸಾ-1ರವರು ದೂರು ನೀಡಿದ್ದರು. ನಮ್ಮ ದೇವಸ್ಥಾನದಲ್ಲಿ ಕಳ್ಳತನವಾದ ಎಲ್ಲಾ ಹಣ ನಮಗೆ ಹಿಂತಿರುಗಿ ಸಿಕ್ಕಿದೆ. ಈ ಪ್ರಕರಣಕ್ಕೆ ಮತ್ತು ಆರೋಪಿತರಿಗೆ ಏನು ಸಂಬಂಧ ಎಂದು ನನಗೆ ಮಾಹಿತಿ ಇಲ್ಲ. ಪೊಲೀಸರು ಎಂದಿಗೂ ನಮ್ಮನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿಲ್ಲ. ನನ್ನ ಪ್ರಕಾರ ಆರೋಪಿತರಿಗೆ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ. ನಾನು ಪೊಲೀಸರ ಬಳಿ ಯಾವುದೇ ಹೇಳಿಕೆ ಅಥವಾ ಮರುಹೇಳಿಕೆ ನೀಡಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ:</u>

ದಿನಾಂಕ: 20-01-2025ರಂದು ನಾನು -------------------------- ನಿಜವಿರುತ್ತದೆ ಎಂದು ಹೇಳಿಕೆಯನ್ನು ಪೊಲೀಸರ ಬಳಿ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ಮತ್ತು ಸಾಕ್ಷಿ ಅಲ್ಲಗಳೆದ ಹೇಳಿಕೆ ಭಾಗವನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ನಿಶಾನೆ ಪಿ-3ರಲ್ಲಿ ನಮೂದಿಸಿದಂತೆ ಪೊಲೀಸರು ನಿಮಗೆ ಆರೋಪಿತರನ್ನು ತೋರಿಸಿ ಪಂಚನಾಮೆಯನ್ನು ಜರುಗಿಸಿದರೂ ಸಹ ಈಗ ಹಣ ಹಿಂತಿರುಗಿ ಬಂದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಿನಾಂಕ: 13-06-2025ರಂದು ನಾನು -------------------------- ನಿಜವಿರುತ್ತದೆ ಎಂದು ಪುನರ ಹೇಳಿಕೆಯನ್ನು ಪೊಲೀಸರ ಬಳಿ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ಮತ್ತು ಸಾಕ್ಷಿ ಅಲ್ಲಗಳೆದ ಪುನರ ಹೇಳಿಕೆ ಭಾಗವನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ನಿಶಾನೆ ಪಿ-4ರಂತೆ ನೀವು ಪುನರ ಹೇಳಿಕೆ ನೀಡಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಜಿ.ಎ.(ಎಲ್.ಎ.ಡಿ.ಸಿ.) ವಕೀಲರಿಂದ - ಏನು ಇಲ್ಲಾ</u>

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.